| |
|---|
| **Deposition Sheets (RP.No.57) Form No.4 (Civil)** |

**IN THE COURT OF CIVIL JUDGE & J.M.F.C., KARKALA.**

**Criminal Case No. 1854/2016**

**.................................................Vs...................................**

ಸಾಕ್ಷಿದಾರನ ಹೆಸರು ಃ ಧೀರಾಜ್ ಪೂಜಾರಿ ಪಿ.ಡಬ್ಲ್ಯೂಃ 2

ತಂದೆಯ ಹೆಸರುಃ ಜಯಂತ್ ಪೂಜಾರಿ

ಪ್ರಾಯ ಃ 33 ವರ್ಷ

ಉದ್ಯೋಗ ಃ ಅಕೌಂಟೆಂಟ್

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 15.02.2025

ದಂ ಪ್ರ ಸಂ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆ

ನಾನು ಪಿರ್ಯಾದಿ ಸಂಸ್ಥೆಯಲ್ಲಿ 12 ವರ್ಷಗಳಿಂದ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ಪಿರ್ಯಾದಿ ಸಂಸ್ಥೆಯಲ್ಲಿ 3 ಜನ ಪಾಲುದಾರರು. ಸದ್ರಿ ಪ್ರಕರಣದಲ್ಲಿ ಹಾಜರಾಗಲು ನನಗೆ ವಿಶೇಷ ಮುಖ್ತಾರು ನಾಮೆಯನ್ನು ನೀಡಿರುತ್ತಾರೆ. ಪಿರ್ಯಾದಿ ಸಂಸ್ಥೆಯು ಗೇರು ಬೀಜ ರಫ್ತು, ಬಾದಮ್ , ಕಾಫಿ , ಖಾದ್ಯ ತೈಲಗಳ ವ್ಯವಹಾರವನ್ನು ಮತ್ತು ಇತರ ಒಣ ಹಣ್ಣುಗಳ ವ್ಯಪಾರ ಮಾಡುತ್ತದೆ. ನಮ್ಮ ಸಂಸ್ಥೆಯು ಆರೋಪಿಗೆ ಗೋಡಂಬಿ ಮತ್ತು ಬಾದಮ್ ನ್ನು ಮಾರಾಟ ಮಾಡಿರುತ್ತೇವೆ. ಅದರ ಬಾಬ್ತು ಹಣವನ್ನು ಮುಂದಿನ ದಿನಾಂಕದಲ್ಲಿ ಕೊಡುವುದಾಗಿ ಭರವಸೆ ನೀಡಿರುತ್ತಾರೆ. ಆರೋಪಿಯ ಬಳಿ ಹಣವನ್ನು ಕೇಳಿದಾಗ ಆರೋಪಿಯು ಚೆಕ್ ನಂ. 475065 ದಿಃ25.05.2016 ರ ಅಂಧ್ರ ಬ್ಯಾಂಕ್ ಕೊಯಮುತ್ತೂರು ಶಾಖೆಯ ರೂ.5,71,200/- ರ ಚೆಕ್ಕನ್ನು ನೀಡಿರುತ್ತಾರೆ.

ನಂತರ ಅದನ್ನು ನಗದೀಕರಣಕ್ಕಾಗಿ ಕಾರ್ಕಳದ ಸಿಂಡಿಕೇಟ್ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇವೆ. ಆದರೆ ಅದು ದಿಃ 23.08.2016 ರಂದು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬುದಾಗಿ ವಾಪಾಸ್ಸು ಬಂದಿರುತ್ತದೆ. ನಂತರ ವಕೀಲರ ಮೂಲಕ ದಿಃ

09.09.2016 ರಂದು ಆರೋಪಿಗೆ ಸದರಿ ಹಣ ಪಾವತಿಸುವಂತೆ ನೋಟಿಸು ನೀಡಿರುತ್ತೇನೆ. ಸದರಿ ನೋಟಿಸು ದಿಃ 12.09.2016 ರಂದು ಆರೋಪಿಗೆ ತಲುಪಿರುವ ಬಗ್ಗೆ ಅಂಚೆ ಸ್ವೀಕೃತಿ ಬಂದಿರುತ್ತದೆ. ಆರೋಪಿ ನೋಟಿಸಿಗೆ ಉತ್ತರ ನೀಡಿರುವುದಿಲ್ಲ ಹಾಗೂ ಸದರಿ ಹಣ ಮರುಪಾವತಿ ಮಾಡಿರುವುದಿಲ್ಲ. ನಂತರ ಈ ದೂರು ದಾಖಲಿಸಿರುತ್ತೇನೆ.

2. ಎಸ್ ಪಿ ಎ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಆರೋಪಿಯು ನೀಡಿದ ಮೂಲ ಚೆಕ್ಕನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-4 ಎಂದು, ಅದರ ಮೇಲೆ ಇರುವ ಆರೋಪಿಯ ಸಹಿಯನ್ನು ನಿಪಿ-4(ಎ) ಎಂದು, ಬ್ಯಾಂಕಿನವರು ನೀಡಿದ ಹಿಂಬರಹ ಹಾಜರುಪಡಿಸಿದ್ದು, ಅದನ್ನು ನಿಪಿ-5 ಎಂದು, ವಕೀಲರ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-6 ಎಂದು, ಅಂಚೆ ರಶೀದಿ ಹಾಜರುಪಡಿಸಿದ್ದು, ಅದನ್ನು ನಿಪಿ-7 ಎಂದು, ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಆರೋಪಿಯು ತಲೆ ಮರೆಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ